

ಕಿಟಕಿ ತೆರೆದಿತ್ತು. ಖ್ಯಾತ ನಟ ಮೋಹನ್‌ಲಾಲ್ ಅವರ ಮಗ ಪ್ರಣಮ್ ಮೋಹನ್‌ಲಾಲ್ ಅವರ ಸಿನಿಮಾದಲ್ಲಿ ನಟಿಸುವ ಅವಕಾಶ ಅವರದಾಗಿತ್ತು.

ಮತ್ತೆ ರೇಚಲ್‌ಗೆ ಕನ್ನಡದಲ್ಲಿ ಅವಕಾಶ ಸಿಕ್ಕಿದ್ದು 'ಲವ್ ಮಾಕ್ಟೇಲ್ 2' ಸಿನಿಮಾದಲ್ಲಿ. 'ಲವ್ ಮಾಕ್ಟೇಲ್ 2 ಸಿನಿಮಾದಲ್ಲಿ ನನ್ನ ಪಾತ್ರ ತುಂಬ ಚೆನ್ನಾಗಿತ್ತು. ಹಾಗಾಗಿ ಕನ್ನಡಕ್ಕೆ ಇದೊಂದು ಒಳ್ಳೆಯ ಲಾಂಚ್ ಎಂದೇ ನನಗನಿಸಿದೆ. ನನ್ನ ಪಾತ್ರವನ್ನು ಸಾಕಷ್ಟು ಜನರು ಮೆಚ್ಚಿಕೊಂಡರು. ಹಾಗೆಯೇ ನನಗೆ ಈಗ ಸಾಕಷ್ಟು ಕನ್ನಡ ಸಿನಿಮಾಗಳಲ್ಲಿ ನಟಿಸುವ ಅವಕಾಶವೂ ಬರುತ್ತಿದೆ' ಎಂದು ರೇಚಲ್ ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಈಗ ರೇಚಲ್ ಅವರು ಡಿ. ಸತ್ಯಪ್ರಕಾಶ್ ಕಥೆ ಬರೆದಿರುವ, ದೀಪಕ್ ಮಧುವನಹಳ್ಳಿ ನಿರ್ದೇಶನದ 'ಅನ್‌ಲಾಕ್ ರಾಘವ' ಎನ್ನುವ ಸಿನಿಮಾಗೆ ನಾಯಕಿಯಾಗಿ ನಟಿಸುತ್ತಿದ್ದಾರೆ. ಹೊಸ ಹುಡುಗ ಮಿಲಿಂದ್ ಈ ಚಿತ್ರದ ನಾಯಕ. ಇತ್ತೀಚೆಗಷ್ಟೇ ಈ ಚಿತ್ರದ ಶೀರ್ಷಿಕೆ ಅನಾವರಣ ಆಗಿದೆ. ಈ ಚಿತ್ರದ ಬಗ್ಗೆ ಮತ್ತು ಚಿತ್ರತಂಡದ ಕುರಿತೂ ರೇಚಲ್ ತುಂಬ ಉತ್ಸಾಹದಿಂದ ಮಾತಾಡುತ್ತಾರೆ.

'ಈ ಸಿನಿಮಾದ ಕಥೆಯನ್ನು ಕೇಳಿ ತುಂಬ ಖುಷಿಯಾಯ್ತು. ತುಂಬ ಹೊಸ ರೀತಿಯ ಅಷ್ಟೇ ಕಮರ್ಷಿಯಲ್ ಗುಣಗಳಿರುವ ಕಥೆ ಇದು. ಹಾಗೆಯೇ ಚಿತ್ರತಂಡವೂ ಅಷ್ಟೇ ಇಷ್ಟವಾಯ್ತು. ಸತ್ಯಪ್ರಕಾಶ್ ಅವರು ತುಂಬ ಚೆನ್ನಾಗಿ ಕಥೆ ಬರೆಯುತ್ತಾರೆ. ನನ್ನ ಪಾತ್ರವೂ ಅಷ್ಟೇ ಚೆನ್ನಾಗಿದೆ. ಇದರಲ್ಲಿ ನಾನು ಆರ್ಕಿಯಾಲಜಿಸ್ಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಆ ಪಾತ್ರ, ಅದಕ್ಕಾಗಿ ನಡೆಸುವ ಸಿದ್ಧತೆ, ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಎಲ್ಲವೂ ನನಗೆ ಕುತೂಹಲ ಹುಟ್ಟಿಸಿತು. ಹಾಗಾಗಿ ಒಪ್ಪಿಕೊಂಡಿದ್ದೇನೆ' ಎನ್ನುವುದು ಅವರ ವಿವರಣೆ.

ವಿಶಿಷ್ಟವಾದ ಪಾತ್ರಕ್ಕೆ ಅಷ್ಟೇ ಶ್ರಮದಿಂದ ಸಿದ್ಧತೆಯನ್ನೂ ನಡೆಸಿದ್ದಾರಂತೆ ರೇಚಲ್. 'ಈಗಾಗಲೇ ವರ್ಕ್‌ಶಾಪ್ ಮಾಡಿದ್ದೇವೆ. ಸಾಕಷ್ಟು ಸಲ ಸ್ಕ್ರಿಪ್ಟ್ ರೀಡಿಂಗ್ ಮಾಡಿದ್ದೇವೆ. ಟೆಸ್ಟ್ ಶೂಟ್ ಕೂಡ ಮಾಡಿದ್ದೇವೆ. ಮೊದಲ ಹಂತದ ಶೂಟಿಂಗ್ ಚಿತ್ರದುರ್ಗದಲ್ಲಿರುತ್ತದೆ. ಚಿತ್ರೀಕರಣ ಪ್ರಾರಂಭವಾಗುವ ಎರಡು ದಿನ ಮೊದಲೇ ಅಲ್ಲಿಗೆ ಹೋಗಿ ಅಲ್ಲಿನ ವಾತಾವರಣ, ಸೆಟ್‌ಗೆ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು ಎಂದು ಯೋಜಿಸಿಕೊಂಡಿದ್ದೇವೆ' ಎಂದು ಹೇಳುತ್ತಾರೆ.

ರೇಚಲ್‌ಗೆ ಇಂಥದ್ದೇ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಚೌಕಟ್ಟೇನೂ ಇಲ್ಲ. ಒಳ್ಳೆಯ ತಂಡ, ಒಳ್ಳೆಯ ಕಥೆ ಸಿಕ್ಕರೆ ನಟಿಸಲು ಒಪ್ಪಿಕೊಳ್ಳುತ್ತೇನೆ ಎನ್ನುವ ಅವರಿಗೆ ಕ್ರೀಡೆಯನ್ನು ಆಧರಿಸಿದ ಸಿನಿಮಾದಲ್ಲಿ ನಟಿಸಬೇಕು ಎಂಬ ಸುಪ್ತ ಬಯಕೆಯೂ ಇದೆ.

'ನಟನೆಯ ಶಾಲೆಗಳಲ್ಲಿ ನಟನೆಯ ಟ್ರಿಕ್ಸ್, ಟಿಪ್ಸ್ ಹೇಳಿಕೊಡಬಹುದೇ ಹೊರತು ನಟನೆಯನ್ನು ಕಲಿಸಲು ಸಾಧ್ಯವಿಲ್ಲ. ಅದು ನಮಗೆ ನಾವೇ ಕಲಿಸಿಕೊಳ್ಳಬೇಕಾದದ್ದು. ನಟಿಸುತ್ತ ನಟಿಸುತ್ತ ಅನುಭವದ ಮೂಲಕವೇ ಗಳಿಸಿಕೊಳ್ಳಬೇಕಾದದ್ದು' ಎನ್ನುವ ರೇಚಲ್, 'ಕನ್ನಡದಲ್ಲಿ ಸಾಕಷ್ಟು ಅವಕಾಶಗಳು ಬರುತ್ತಿವೆ. ನನಗೂ ಕನ್ನಡ ಸಿನಿಮಾಗಳಲ್ಲಿ ನಟಿಸಲು ಇಷ್ಟ. ಆದರೆ ಬೇರೆ ಯಾವುದಾದರೂ ಭಾಷೆಯಲ್ಲಿ ಒಳ್ಳೆಯ ಅವಕಾಶಗಳು ಬಂದರೂ ನಟಿಸುತ್ತೇನೆ. ಈಗ ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ಒಂದೊಂದು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ನಂತರ ಯಾವ ಚಿತ್ರರಂಗ ಕರೆಯುತ್ತದೆಯೋ ಕಾದುನೋಡಬೇಕು' ಎಂದು ನಗುತ್ತಾರೆ.

■




# 'ದೂರದರ್ಶನ' ಮೊದಲ ನೋಟ!

'ದೂರದರ್ಶನ' ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣ ಒಂದು ಬಗೆಯ ನಾಸ್ಟಾಲ್ಜಿಕ್ ಭಾವ ನಮ್ಮ ಮನಸೊಳಗೆ ಆವರಿಸಿಕೊಳ್ಳುತ್ತದೆ. ದೂರದರ್ಶನ ಕೇಂದ್ರದ ಲೋಗೊ, ಅದರ ಪ್ರೋಮೊ, ಅದರಲ್ಲಿ ಬರುವ ಕಾರ್ಯಕ್ರಮಗಳು, ಅಪರೂಪದ ಸಂದರ್ಶನಗಳು ಹಾಗೂ ಅವುಗಳ ಜೊತೆಗೇ ಹೆಣೆದುಕೊಂಡಿರುವ ನಮ್ಮ ಬದುಕಿನ ನಡಿಗೆ ಎಲ್ಲವೂ ಸೇರಿ ಮನಸ್ಸು ತುಂಬಿ ನಿಲ್ಲುತ್ತದೆ. ಆ ಹೆಸರಿನೊಟ್ಟಿಗೆ ಇರುವ ಭಾವವನ್ನು ಮತ್ತೆ ಪ್ರೇಕ್ಷಕರ ಮನಸಲ್ಲಿ ತುಂಬಿಸಲು ಸಿದ್ಧರಾಗಿದ್ದಾರೆ ಸುಕೇಶ್ ಶೆಟ್ಟಿ ಎಂಬ ಉತ್ಸಾಹಿ ಹೊಸ ನಿರ್ದೇಶಕರ ತಂಡ.

ನಿರ್ದೇಶಕರು ಹೊಸಬರಾದರೂ ತಂಡದಲ್ಲಿ ಎಲ್ಲರೂ ಹೊಸಬರೇ ಏನಿಲ್ಲ. ಹಲವು ಅನುಭವಿ ಕಲಾವಿದರ ದಂಡು ಅಲ್ಲಿದೆ. ಪೃಥ್ವಿ ಅಂಬಾರ್ ಮತ್ತು ಆಯಾನ ಜೊತೆಗೆ ಸುಂದರ್‌ವೀಣಾ, ಹರಿಣಿ, ಉಗ್ರಂ ಮಂಜು ಕೂಡ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಇದು 1980ರ ದಶಕದಲ್ಲಿ ನಡೆಯುವ ಕಥೆಯಂತೆ. ಒಂದು ಟೀವಿಯ ಸುತ್ತಲೇ ಈ ಕಥೆ ಹೆಣೆಯಲ್ಪಟ್ಟಿರುವುದರಿಂದ 'ದೂರದರ್ಶನ' ಎಂಬ ಹೆಸರಿಡಲಾಗಿದೆ. ಎಂಬತ್ತರ ದಶಕವನ್ನು ಚಿತ್ರದಲ್ಲಿ ತುಂಬ ಚೆನ್ನಾಗಿ ಕಟ್ಟಿಕೊಟ್ಟಿದ್ದಾರಂತೆ. ಇತ್ತೀಚೆಗಷ್ಟೇ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದ್ದು ಈ ಕುರಿತು ನಿರೀಕ್ಷೆಯನ್ನು ಹೆಚ್ಚಿಸುವಂತಿದೆ.

■